**ಸಾಕ್ಷಿಯನ್ನು ದಿನಾಂಕ 07.02.2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು**
**ಪಾಟೀ ಸವಾಲುಃ ಎ ಜಿ ಪಿ ರವರಿಂದ**

ಸರ್ಕಾರದವರು ಭೂಸ್ವಾಧೀನ ಪಡಿಸಿಕೊಳ್ಳುವಾಗ ಯಾವುದೇ ನೋಟಿಸ ನನಗೆ ನೀಡಿಲ್ಲ. ನಮ್ಮ ಹೊಲದಲ್ಲಿ ಸರ್ಕಾರದವರು ಕಾಲುವೆಗಾಗಿ ಪೈಪಲೈನ ಹಾಕಿಕೊಂಡು ಬರುವಾಗ ನಮಗೆ ಸ್ವಾಧೀನದ ವಿಷಯ ಗೊತ್ತಾಯಿತು. ಭೂಸ್ವಾಧೀನಪಡಿಸಿಕೊಳ್ಳುವ ಮುಂಚೆ ಸರ್ಕಾರದವರು ನಮ್ಮ ಜಮೀನಿಗೆ ಪರಿಶೀಲನೆಗೆ ಬಂದಿದ್ದರು, ಆದರೆ ನಾನು ಆಗ ಇರಲಿಲ್ಲ. ಅಧಿಕಾರಿಗಳು ನಮ್ಮ ಜಮೀನುಗಳನ್ನು ಪರಿಶೀಲಿಸಿ ಸರಿಯಾದ ಪರಿಹಾರವನ್ನು ನಿಗದಿಪಡಿಸಿದ್ದಾರೆ ಅಂದರೆ ಸರಿಯಲ್ಲ.

2. ನಮ್ಮ ಜಮೀನು ಜನವಾಡ ಗ್ರಾಮಕ್ಕೆ ಸಂಬಂಧಪಟ್ಟ ಜಮೀನು. ನಮ್ಮ ಊರಿನಲ್ಲಿ ಪ್ರತಿವರ್ಷ ಜಮೀನುಗಳ ಮಾರಾಟ ಆಗುತ್ತವೆ. ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ವರ್ಷದಲ್ಲಿಯೂ ಸಹ ನಮ್ಮ ಊರಿನಲ್ಲಿ ಜಮೀನುಗಳ ಮಾರಾಟ ಆಗಿವೆ. ಜನವಾಡ ಗ್ರಾಮದ ಜಮೀನುಗಳ ಖರೀದಿಪತ್ರಗಳನ್ನು ಪರಿಶೀಲಿಸಿ, ಸರಿಯಾದ ಪರಿಹಾರವನ್ನು ಸರ್ಕಾರದವರು ನೀಡಿದ್ದಾರೆ ಅಂದರೆ ಸರಿಯಲ್ಲ. ಹೆಚ್ಚು ಬೆಲೆಗೆ ಮಾರಾಟವಾದ ಜಮೀನುಗಳ ದಾಖಲೆಗಳನ್ನು ಪರಿಶೀಲಿಸಿಯೇ ನಮ್ಮ ಜಮೀನಿಗೆ ಯೋಗ್ಯವಾದ ಪರಿಹಾರ ನೀಡಿದ್ದಾರೆ ಅಂದರೆ ಸರಿಯಲ್ಲ. ಜನವಾಡ ಗ್ರಾಮದ ಜಮೀನುಗಳ ಕ್ರಯದ ಪತ್ರಗಳು ಇದ್ದಿದ್ದಕಾರಣ, ಬಿದರಿ, ತೊದಲಬಾಗಿ ಹಾಗೂ ಕವಟಗಿಯ ಜಮೀನುಗಳ ಕ್ರಯಪತ್ರಗಳನ್ನು ಪರಿಗಣಿಸುವ ಪ್ರಶ್ನೆ ಉದ್ಭವಿಸುವುದಿಲ್ಲ ಅಂದರೆ ಸರಿಯಲ್ಲ.

3. ಜನವಾಡ ಮತ್ತು ಕವಟಗಿ ಗ್ರಾಮಗಳಲ್ಲಿ ಪ್ರತಿವರ್ಷ ಪ್ರವಾಹ ಬರುತ್ತದೆ ಅಂದರೆ ಸರಿ. ಪ್ರವಾಹ ಬಂದಾಗ ಹೊಲದಲ್ಲಿ ಸುಮಾರು ಒಂದುವರೆ ತಿಂಗಳು ನೀರು ಇರುತ್ತದೆ. ಆ ರೀತಿ ನದಿನೀರು ನಿಲ್ಲುವುದರಿಂದ ನಮ್ಮ ಜಮೀನುಗಳು ಸವಳು ಆಗಿ ಫಲವತ್ತತೆ ಇಲ್ಲ ಅಂದರೆ ಸರಿಯಲ್ಲ.

4. ನಾನು ನಮ್ಮ ಜಮೀನುಗಳಲ್ಲಿ ಕಬ್ಬು, ಅರಿಶಿಣ, ಸೂರ್ಯಕಾಂತಿ ಮುಂತಾದ ಬೆಳೆಗಳನ್ನು ಬೆಳೆಯುತ್ತಿದ್ದ ಬಗ್ಗೆ ಯಾವುದೇ ದಾಖಲೆಗಳನ್ನು

ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ನಾನು ಕಬ್ಬನ್ನು ಒಮ್ಮೆ ನಾಟಿ ಮಾಡಿದರೆ 3 ರಿಂದ 4 ಬೆಳೆ ಬೆಳೆಯುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 1 ಎಕರೆ ಜಮೀನಿನಲ್ಲಿ 70 ರಿಂದ 80 ಟನ್ ಕಬ್ಬು ಬೆಳೆಯುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಬೆಳೆದ ಕಬ್ಬನ್ನು ನಂದಿ ಮತ್ತು ಜಮಖಂಡಿ ಶುಗರ್ಸ ಕಾರ್ಖಾನೆಗೆ ಕಳಿಸಿದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. 1 ಟನ್ ಕಬ್ಬಿಗೆ 3750 ರೂ. ಬೆಲೆ ಇರುವ ಬಗ್ಗೆ ನಾನು ದಾಖಲೆ ಸಲ್ಲಿಸಿರುತ್ತೇನೆ. ಕಬ್ಬಿನ ಬೆಳೆಯಿಂದ ವರ್ಷಕ್ಕೆ 2,59,350/-ರೂ. ಆದಾಯ ಆಗುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 25,93,500/-ರೂ. 10 ವರ್ಷಕ್ಕೆ ಆದಾಯ ಆಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸಾಗುವಳಿ ಖರ್ಚು ಸುಮಾರು 20 ಪ್ರತಿಶತ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

5. ನಾನು ಕಬ್ಬಿನ ಜೊತೆಗೆ ಮಿಶ್ರಬೆಳೆಗಳಾದ ಶೇಂಗಾ, ಕಡಲೆ, ಹೆಸರು, ಉಳ್ಳಾಗಡ್ಡಿ, ಮೆಣಸಿನಕಾಯಿ ಬೆಳೆಯುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಎಕರೆಗೆ ಕನಿಷ್ಟ 15,000 ರೂ. ತಿಂಗಳಿಗೆ ಮೇಲೆ ಹೇಳಿದ ಬೆಳೆಗಳಿಂದ ತೆಗೆಯುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ವರ್ಷಕ್ಕೆ 40 ಟನ್ ಇಳುವರಿ ಕಬ್ಬಿನ ಮೇವು ಮಾರಾಟದಿಂದ 32,000/-ಆದಾಯ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ನನ್ನ ಮುಖ್ಯವಿಚಾರಣೆಯ ಪ್ಯಾರಾ-8 ರಲ್ಲಿ ಉಲ್ಲೇಖಿಸಿರುವ ತೀರ್ಪುಗಳ ವಿರುದ್ಧ ಸರ್ಕಾರದವರು ಈಗಾಗಲೇ ಮೇಲ್ಮನವಿ ಸಲ್ಲಿಸಿರುವುದರಿಂದ ಅವುಗಳು ಈ ಪ್ರಕರಣಕ್ಕೆ ಅನ್ವಯಿಸುವುದಿಲ್ಲ ಅಂದರೆ ಸರಿಯಲ್ಲ.

6. ನಿ.ಪಿ.2 ರಿಂದ 4 ರ ಖರೀದಿ ಕರಾರುಪತ್ರಗಳು ಪ್ರಾಮಾಣಿಕವಾಗಿ ಮಾಡಿದಂತಹ ಖರೀದಿ ಕರಾರುಪತ್ರಗಳು ಅಲ್ಲ ಅಂದರೆ ಸರಿಯಲ್ಲ. ನಾನು ಸಲ್ಲಿಸಿದ ಅರ್ಜಿಗಳು ಕಾಲಮಿತಿಯೊಳಗೆ ಇಲ್ಲ ಅಂದರೆ ಸರಿಯಲ್ಲ. ಪ್ರಸ್ತುತ

ಪ್ರಕರಣದೊಂದಿಗೆ ಒಟ್ಟುಗೂಡಿದ ಪ್ರಕರಣಗಳ ಅರ್ಜಿದಾರರು ತಮ್ಮ ಜಮೀನುಗಳಲ್ಲಿ ಯಾವ ಯಾವ ಬೆಳೆಗಳನ್ನು ಬೆಳೆಯುತ್ತಾರೆ ಎಂದು ನನಗೆ ಮಾಹಿತಿ ಇಲ್ಲ ಅಂದರೆ ಸರಿಯಲ್ಲ. ಹೆಚ್ಚಿನ ಪರಿಹಾರಕ್ಕಾಗಿ ನಿ.ಪಿ.2 ರಿಂದ 4 ನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

MAHAMED IMTHIYAZ AHAMED
Digitally signed by MAHAMED IMTHIYAZ AHAMED
Date: 2026.02.09 15:43:56 +0530

1 ನೇ ಹೆಚ್ಚುವರಿ ಜಿಲ್ಲಾ ವ ಸತ್ರ ನ್ಯಾಯಾಧೀಶರು
ಬಾಗಲಕೋಟ, ಉಪಸ್ಥಿತಿ ಜಮಖಂಡಿ